ಈ) ಇಂಟೆಲಿಜನ್ಸ್ ಶಾಖೆಯನ್ನು ಚುರುಕುಗೊಳಿಸಲು ಆಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನು ಈ ಕೆಳಗೆಕಂಡ ವಿಶೇಷ ತರಬೇತಿಗಾಗಿ ಕಳುಹಿಸಲಾಗುತ್ತಿದೆ.

೧. ಭಾರತ ಸರ್ಕಾರದಿಂದ ನೇಮಿಸಲ್ಪಟ್ಟಿರುವ ತಜ್ಞತೆ ಜನರಲ್ ಇಂಟೆಲಿಜೆನ್ಸ್ ಸಿ.ಐ.ಪಿ. ಸೆಕ್ಯೂರಿಟಿ, ಹ್ಯಾಂಡ್ಲಿಂಗ್ ಅಂಡ್ ಪೆಪ್ಯೂಸಿಂಗ್ ಆಫ್ ಎಕ್ಸ್‌ಪ್ಲೊಸೀವ್ಸ್ ಓರಿಯೆಂಟೇಷನ್ ತರಬೇತಿ.

೨. ರಾಜ್ಯ ಇಂಟೆಲಿಜನ್ಸ್ ಘಟಕದಲ್ಲಿ ಪಾಠ ತರಬೇತಿಗಳನ್ನು ಕೊಡುವುದಕ್ಕೆ ವ್ಯವಸ್ಥೆಮಾಡಲಾಗಿದೆ (ಬೆಂಗಳೂರು).

ಆರೋಗ್ಯ ಇಲಾಖೆಯಲ್ಲಿ ದಾದಿಯರಿಗೆ ಸಮವಸ್ತ್ರಗಳ ಭತ್ಯವನ್ನು ಕೊಡುವ ಬಗ್ಗೆ

೨೦೪. ಶ್ರೀ ಎಸ್. ಆರ್. ನೋರೆ —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಸೇವೆಯಲ್ಲಿರುವ ಸಹಾಯಕ ದಾದಿಯವರಿಗೆ(ಎ.ಎನ್. ಎಮ್.) ಸಮವಸ್ತ್ರಗಳ ಭತ್ಯಗಳನ್ನು ಕೊಡಲಾಗುತ್ತಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುವ ಇವರಿಗೆ ಅದನ್ನು ಕೊಡದಿರಲು ಕಾರಣಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು.).—

ಅ) ಇಲ್ಲ.

ಆ) ೧೯೭೦ರ ವೇತನ ಸಮಿತಿ ಆಯೋಗವು ಮಹಿಳಾ ಆರೋಗ್ಯ ಕಾರ್ಯ ಕರ್ತರವರಿಗೆ ಸಮವಸ್ತ್ರಗಳ ಭತ್ಯವನ್ನು ಕೊಡಬಹುದೆಂದು ಶಿಫಾರಸ್ಸು ಮಾಡಿರುವುದಿಲ್ಲ. ಆದ್ದರಿಂದ ಈ ಭತ್ಯವನ್ನು ನಿಲ್ಲಿಸಲಾಗಿದೆ.

ರಾಜ್ಯದಲ್ಲಿ ಸ್ವಾತಂತ್ರ್ಯ ಯೋಧರ ಸಹಾಯಧನ ಕುರಿತು

೧೭೮. ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರ್ಯ ವೀರ ಯೋಧರಿಗೆ ರೂಪಾಯಿ ೯೦, ೧೦೦ ಹಾಗೂ ೧೨೫ ಗೌರವಧನಕ್ಕೂಡುತ್ತಿರುವುದು ಯಾವ ಆಧಾರದ ಮೇಲೆ?

ಆ) ಸ್ವಾತಂತ್ರ್ಯ ಯೋಧರಿಗೆ ಸರ್ಕಾರದವರು ಉಚಿತ ವೈದ್ಯಕೀಯ ಸೌಲಭ್ಯ ಕೊಡುವ ಯೋಜನೆ ಇದೆಯೇ ?

ಇ) ಹಾಗಿದ್ದಲ್ಲಿ ಒಂದು ವರ್ಷಕ್ಕೆ ಒಬ್ಬನಿಗೆ ವೈದ್ಯಕೀಯ ಸೌಲಭ್ಯದ ಸರಾಸರಿ ಖರ್ಚು ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು.).—

ಅ) ೧೯೬೭ನೇ ಸಾಲಿನಲ್ಲಿ ಸ್ವಾತಂತ್ರ್ಯ ಯೋಧರುಗಳಿಗೆ ವಿಶ್ರಾಂತಿ ವೇತನ(ಗೌರವಧನ) ನೀಡುವ ಸಲುವಾಗಿ ಕರ್ನಾಟಕ ಸರ್ಕಾರವು ಯೋಜನೆಯೊಂದನ್ನು ರೂಪಿಸಿತು. ಪ್ರಾರಂಭದಲ್ಲಿ, ಸ್ವಾತಂತ್ರ್ಯ ಚಳುವಳಿಯ ಸಂಬಂಧ ಆರು ತಿಂಗಳಿಗೆ ಕಡಿಮೆಯಿಲ್ಲದಂತೆ ಕಾರಾಗೃಹವಾಸ ಅನುಭವಿಸಿದ ಎಲ್ಲಾ ಅರ್ಹ ಸ್ವಾತಂತ್ರ್ಯ ಯೋಧರುಗಳಿಗೆ ಮಾಹ್ತಯಾನ ರೂ. ೫೦-೦೦ರಂತೆ ವಿಶ್ರಾಂತಿ ವೇತನ ಮಂಜೂರು ಮಾಡಲಾಗುತ್ತಿತ್ತು. ತರುವಾಯ, ಕಾರಾಗೃಹವಾಸದ ಅವಧಿಯನ್ನು ೩ ತಿಂಗಳಿಗೆ ಇಳಿಸಲಾಯ್ತು. ವಿಶ್ರಾಂತಿ ವೇತನದ ಮೊತ್ತವನ್ನು ೧-೬-೧೯೭೧ರಿಂದ ಅನ್ವಯವಾಗುವಂತೆ ರೂ. ೭೫-೦೦ಕ್ಕೆ ಹೆಚ್ಚಿಸಲಾಯ್ತು. ಪುನ : ಹಲವು ಸ್ವಾತಂತ್ರ್ಯ ಯೋಧರ ಸಂಘಗಳ ಮನವಿ ಮೇರೆಗೆ ಸದರಿ